ಇ) ಮಹಾರಾಷ್ಟ್ರದಲ್ಲಿ ಬಸ್ಸುಗಳಲ್ಲಿ ಶೇ 50% ಮಾತ್ರ ಟಿಕೇಟ್ ದರ ನೀಡುತ್ತಿರುವ ಮಾದರಿಯಲ್ಲೇ ಇಲ್ಲಿಯೂ ಸಹ ನೀಡಲಾಗುವುದೆ,

ಈ) ಈ ಬಗ್ಗೆ ಯಾವಾಗ ಕ್ರಮ ಜರುಗಿಸಲಾಗುವುದು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು)

ಅ) ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಸ್ವಯಂ ಸೇವಾ ಸಂಸ್ಥೆಯ ಸಹಯೋಗದೊಂದಿಗೆ ಬೀದರ್ ಜಿಲ್ಲೆಯಲ್ಲಿ ಈವರೆಗೆ ಸುಮಾರು 1514 ಗುರುತಿನ ಚೀಟಿಯನ್ನು ಹಿರಿಯ ನಾಗರಿಕರಿಗೆ ವಿತರಿಸಿರುತ್ತದೆ

ಆ) 65 ವರ್ಷ ವಯೋಮಿತಿಗಿಂತ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ರಿಯಾಯಿತಿ ದರದ ಬಸ್ ಪಾಸ್‌ನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ನೀಡಲಾಗುತ್ತಿದೆ ಇದನ್ನು ಹೊರತುಪಡಿಸಿ ನೀಡುತ್ತಿರುವ ಗುರುತಿನ ಚೀಟಿಯ ಆಧಾರದ ಮೇಲೆ ಯಾವ ಸೌಲಭ್ಯಗಳನ್ನು ನೀಡುತ್ತಿಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

941 (1264) ಶ್ರೀ ರಘು ಎಸ್ (ಶಾಂತಿನಗರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಮಿನಿಸ್ಟರಿ ಆಫ್ ಕಮ್ಯೂನಿಕೇಷನ್ ಗೃಹ ನಿರ್ಮಾಣ ಸಹಕಾರ ಸಂಘದವರು ಹೊಸಹಳ್ಳಿ, ಉತ್ತರಹಳ್ಳಿ ಮತ್ತು ಬಾಗಲೂರು ಗ್ರಾಮಗಳಲ್ಲಿ ಎಷ್ಟು ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿದ್ದಾರೆ, (ವಿವರ ಕೊಡುವುದು)

ಆ) ಈ ಸಂಘವು ಭೂ ಸುಧಾರಣಾ ಕಾಯ್ದೆ ಉಲ್ಲಂಘಿಸಿ ಜಮೀನು ಪಡೆಯಲಾಗಿದೆಯೇ,

ಇ) ಹಾಗಿದ್ದಲ್ಲಿ ಇವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ಹೌದು ಪಡೆದಿದ್ದಾರೆ ಸಂಘವು ದಿನಾಂಕ 1-7-2004ರಂದು ಶ್ರೀ ಕೆ ಎಸ್ ಮಂಜುನಾಥ, ಎಂ ಸಿ ಎನ್ ಡೆವಲಪರ್ಸ್, ಬೆಂಗಳೂರು-92 ಎಂಬುವರೊಡನೆ ಕರಾರು ಮಾಡಿಕೊಂಡು ಬಡಾವಣೆ ನಿರ್ಮಿಸಲು ಹೊಸಹಳ್ಳಿ, ಜಾಲ ಹೋಬಳಿ, ಯಲಹಂಕ ತಾಲ್ಲೂಕು ಇಲ್ಲಿ 250 ರಿಂದ 280 ಎಕರೆ

ಜಮೀನನ್ನು ಪಡೆದುಕೊಳ್ಳಲು ಈ ಜಮೀನನ್ನು ಕಾನೂನು ಬದ್ಧವಾಗಿ ಭೂ ಪರಿವರ್ತನೆ ಮಾಡಿ ಸಂಘದ ಹೆಸರಿಗೆ ನೊಂದಾಯಿಸಿ ಬಡಾವಣೆಯ ಎಲ್ಲಾ ಕಾಮಗಾರಿಗಳನ್ನು ಅಂದರೆ ರಸ್ತೆ ನಿರ್ಮಾಣ (ಟಾರು ಹಾಕುವುದು ಸೇರಿ) ಒಳ ಚರಂಡಿ, ನೀರು ಸರಬರಾಜು ಸದಸ್ಯರ ಅನುಕೂಲಕ್ಕಾಗಿ ಕ್ಲಬ್ ಕಟ್ಟಡ, ಪಾರ್ಕ್ ನಿರ್ಮಾಣ, ಬೀದಿ ದೀಪಗಳು ಹಾಗೂ ಬಡಾವಣೆಯ ಸುತ್ತ 8' ಅಡಿ ಕಾಂಪೌಂಡು ನಿರ್ಮಿಸುವುದು ಮತ್ತು ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಅಥಾರಿಟಿ (BIAPA) ದಿಂದ ಬಡಾವಣೆಯ ನಕ್ಷೆ ಅನುಮೋದಿಸಿ ಕೊಡುವುದು ಹಾಗೂ ಇತರೆ ಕೆಲಸಗಳು ಸೇರಿ ಕರಾರು ಮಾಡಿಕೊಂಡಿದ್ದು ಚದರ ಅಡಿಗೆ ರೂ 180/–ರಂತೆ ಒಪ್ಪಿಕೊಂಡಿರುತ್ತಾರೆ ಈಗಾಗಲೇ ಭೂಪರಿವರ್ತಿತ 72 ಎಕರೆ ಜಮೀನನ್ನು ಸಂಘದ ಹೆಸರಿಗೆ ನೊಂದಾಯಿಸಿರುತ್ತಾರೆ ಉಳಿಕೆ ಜಮೀನುಗಳನ್ನು ಕ್ರಯಕ್ಕೆ ಕೊಳ್ಳುತ್ತಿದ್ದು ಇದಕ್ಕೆ ಸಂಬಂಧಿಸಿದಂತೆ ಬೂ ದಾಖಲೆಗಳು ವಿವಿಧ ಹಂತದಲ್ಲಿ ಇರುತ್ತದೆ

ಆ) ಸಂಘವು ಎಂಸಿಎನ್ ಡೆವಲಪರ್ಸ್, ಬೆಂಗಳೂರು ಇವರೊಡನೆ ಸುಮಾರು 250 ರಿಂದ 280 ಎಕರೆ ಜಮೀನನ್ನು ಪಡೆದುಕೊಳ್ಳಲು ಕರಾರು ಮಾಡಿಕೊಂಡಿದ್ದು ಇದರನ್ವಯ ಇದುವರೆಗೂ 273 ಎಕರೆ ಜಮೀನನ್ನು ಒಡಂಬಡಿಕೆ ಮೂಲಕ ಅರ್ಜಿದಾರರು ಪಡೆದುಕೊಂಡು ಈ ಪೈಕಿ 72 ಎಕರೆಗಳನ್ನು ಸಂಘದ ಹೆಸರಿಗೆ ಭೂ ಪರಿವರ್ತನೆ ಮಾಡಿಸಿರುತ್ತಾರೆ ಸದರಿ ಭೂ ಪರಿವರ್ತನೆಯು ಕ್ರಮಬದ್ಧವಾಗಿಲ್ಲವೆಂದು ವಿಶೇಷ ಜಿಲ್ಲಾಧಿಕಾರಿಗಳು ಸದರಿ ಭೂ ಪರಿವರ್ತನೆಯನ್ನು ರದ್ದುಗೊಳಿಸಿದ ಆದೇಶದ ದಿ 24–1–2007 ರಂದು ಸಂಘದವರು ಕರ್ನಾಟಕ ಮೇಲ್ಮನವಿಯು ನ್ಯಾಯಾಧಿಕರಣ, ಬೆಂಗಳೂರು ಇವರಲ್ಲಿ ಅಪೀಲು ಸಂ 1368 ರಿಂದ 1389/2006 ಇದರಲ್ಲಿ ಅಪೀಲು ದಾಖಲಿಸಿ ಸದರಿ ಆದೇಶದ ವಿರುದ್ಧ ತಡೆಯಾಜ್ಞೆ ಪಡೆದಿರುತ್ತಾರೆ ಈ ಮೇಲ್ಮನವಿ ಇತ್ಯರ್ಥಕ್ಕೆ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಮುಂದೆ ಬಾಕಿ ಇರುತ್ತದೆ

ಇ) ಭೂ ಪರಿವರ್ತನಾ ಆಜ್ಞೆಯನ್ನು ಸರ್ಕಾರವು ರದ್ದುಗೊಳಿಸಿದ್ದು ಇದರ ವಿರುದ್ಧ ಸಂಘವು ಸಲ್ಲಿಸಿರುವ ಮೇಲ್ಮನವಿ ರೆವಿನ್ಯೂ ನ್ಯಾಯಾಧಿಕರಣ ಇದರ ಮುಂದೆ ಇತ್ಯರ್ಥಕ್ಕೆ ಬಾಕಿ ಇರುತ್ತದೆ